# ಅಲಮೇಲಮ್ಮ ನಿಗೊಂದು ಕಾಲ



ಶ್ರದ್ಧಾ ಶ್ರೀನಾಥ್ ಮತ್ತು ರಿಶಿ ಪ್ರಮುಖ ಪಾತ್ರಗಳಲ್ಲಿ ನಟಿಸಿರುವ 'ಆಪರೇಷನ್ ಅಲಮೇಲಮ್ಮ' ಚಿತ್ರದ ಟ್ರೈಲರ್ ಕಳೆದ ವಾರ ಬಿಡುಗಡೆಯಾಗಿದೆ. ಗಾಂಧಿನಗರದಲ್ಲೀಗ ಅಲಮೇಲಮ್ಮನದೇ ಸುದ್ದಿ. ಚಿತ್ರರಸಿಕರ ಜೊತೆಗೆ ಚಿತ್ರರಂಗದವರು ಕೂಡ ಟ್ರೈಲರ್ ನೋಡಿ ಸಿನಿಮಾ ನೋಡುವ ಕುತೂಹಲ ವ್ಯಕ್ತಪಡಿಸಿರುವುದು ವಿಶೇಷ. ಟ್ರೈಲರ್ ಮೆಚ್ಚಿಕೊಂಡವರಲ್ಲಿ ಗಣೇಶ್, ರಕ್ಷಿತ್ ಶೆಟ್ಟಿ, ಅನೂಪ್ ಭಂಡಾರಿ, ನಿರೂಪ್ ಭಂಡಾರಿ ಸೇರಿದ್ದಾರೆ.

ಅಲಮೇಲಮ್ಮ ಸುನಿ ನಿರ್ದೇಶನದಲ್ಲಿ ರೂಪುಗೊಳ್ಳುತ್ತಿರುವ ವಿಶೇಷ ಸಿನಿಮಾ. ಸಿನಿಮಾದ ಶೀರ್ಷಿಕೆಯಿಂದ ಹಿಡಿದು ತಾರಾಗಣ, ಪೋಸ್ಟರ್, ಕಥೆ, ಟ್ರೈಲರ್, ಎಲ್ಲದರ ಮೂಲಕವೂ ಸುನಿ ಸಿನಿಮಾ ಸುದ್ದಿ ಮಾಡುತ್ತಿದೆ. 'ಸಿಂಪಲ್ಲಾಗೊಂದ್ ಲವ್ ಸ್ಟೋರಿ' ನಂತರ ಮತ್ತೊಂದು ದೊಡ್ಡ ಯಶಸ್ಸಿನ ನಿರೀಕ್ಷೆಯಲ್ಲಿರುವ ಅವರನ್ನು ಅಲಮೇಲಮ್ಮ ಕೈಹಿಡಿಯುವಂತಿದ್ದಾಳೆ.

ಈಗಾಗಲೇ 'ಆಪರೇಷನ್ ಅಲಮೇಲಮ್ಮ' ಚಿತ್ರದ ವಿತರಣೆಯ ಹಕ್ಕುಗಳು ಮಾರಾಟವಾಗಿದ್ದು, ಸಿನಿಮಾ ತೆರೆ ಕಾಣುವ ಮೊದಲೇ ಲಾಭ ಗಳಿಸಿದೆ ಎನ್ನಲಾಗುತ್ತಿದೆ.

ಸಿನಿಮಾ ತೆರೆ ಕಾಣುವ ಮೊದಲೇ ರೂಪುಗೊಂಡಿರುವ ಕ್ರೇಜ್ ಹಿನ್ನೆಲೆಯಲ್ಲಿ ಅಲಮೇಲಮ್ಮ ಚಿತ್ರದ 2ನೇ ಭಾಗವನ್ನು ರೂಪಿಸಲು ಸುನಿ ಯೋಚಿಸುತ್ತಿದ್ದಾರೆ. ಈ ಸಂಬಂಧ ನಿರ್ಮಾಪಕರೊಂದಿಗೆ ಮಾತುಕತೆಯೂ ನಡೆದಿದೆ. ಜುಲೈನಲ್ಲಿ 'ಆಪರೇಷನ್ ಅಲಮೇಲಮ್ಮ' ತೆರೆ ಕಾಣುತ್ತಿದೆ. ಜೂಡಾ ಸ್ಯಾಂಡಿ ಸಂಗೀತ ಹಾಗೂ ಅಭಿಷೇಕ್ ಕಾಸರಗೋಡು ಛಾಯಾಗ್ರಹಣ ಚಿತ್ರಕ್ಕಿದೆ.



# ಪಂಟರ ಮಹತ್ವಾಕಾಂಕ್ಷೆಯ 'ಪಂಟ'

'ಲಕ್ಷ್ಮಣ' ಸಿನಿಮಾದ ಮೂಲಕ ಕನ್ನಡ ಚಿತ್ರರಂಗಕ್ಕೆ ಅದ್ದೂರಿಯಾಗಿ ಪರಿಚಯಗೊಂಡ ಅನೂಪ್ ಈಗ 'ಪಂಟ'ನ ವೇಷದಲ್ಲಿ ಮತ್ತೆ ಪ್ರೇಕ್ಷಕರಿಗೆ ಮುಖಾಮುಖಿ ಆಗುತ್ತಿದ್ದಾರೆ.

ಎಸ್. ನಾರಾಯಣ್ 'ಪಂಟ' ಚಿತ್ರದ ನಿರ್ದೇಶಕರು. ಅನುಭವಿ ನಿರ್ದೇಶಕರ ಜೊತೆ ಕೆಲಸ ಮಾಡಿದ್ದು ಕಲಿಕೆಯ ಪಾಠಶಾಲೆಯಾಗಿ ಹಾಗೂ ಸವಿ ನೆನಪುಗಳ ಬುತ್ತಿಯ ರೂಪದಲ್ಲಿ ಅನೂಪ್ ಅವರಿಗೆ ಪರಿಣಮಿಸಿದೆ. ನಾರಾಯಣ್ ಅವರ ಹಾಜರಿಯಲ್ಲಿ ಚಿತ್ರೀಕರಣದ ಸೆಟ್‌ನಲ್ಲಿ ಉತ್ಸಾಹದ ವಾತಾವರಣ ಸದಾ ತುಂಬಿರುತ್ತಿತ್ತು. ಹಾಗಾಗಿ, ಶೂಟಿಂಗ್ ಮುಗಿದದ್ದೇ ತಿಳಿಯಲಿಲ್ಲ ಎನ್ನುವುದು ಅವರ ಉಲ್ಲಾಸದ ಮಾತು. ರಿತೀಕ್ಷಾ ಎನ್ನುವ ಹೊಸ ಹುಡುಗಿ ಚಿತ್ರದ ನಾಯಕಿ.

ನಾರಾಯಣ್ ಅವರಿಗೆ 'ಪಂಟ' ಸಿನಿಮಾದ ಬಗ್ಗೆ ಅಪಾರ ನಿರೀಕ್ಷೆಗಳಿವೆ. ನಿರ್ದೇಶಕನಾಗಿ ಇಪ್ಪತ್ತೈದು ವರ್ಷಗಳನ್ನು ಪೂರೈಸಿರುವ ಸಂದರ್ಭದಲ್ಲಿ ತೆರೆ ಕಾಣುತ್ತಿರುವ 'ಪಂಟ' ತಮ್ಮ ವೃತ್ತಿಜೀವನದಲ್ಲಿ ಸ್ಮರಣೀಯ ಸಿನಿಮಾ ಆಗಬೇಕು ಎನ್ನುವ ಹಂಬಲ ಅವರದು.

ಸಿದ್ಧಸೂತ್ರಗಳ ಕಮರ್ಷಿಯಲ್ ಪ್ರಯತ್ನವೂ ಅಲ್ಲದ, ಆಫ್ಬೀಟ್ ವರ್ಗಕ್ಕೂ ಕಣ್ಣುಮುಚ್ಚಿ ಸೇರಿಸಲು ಸಾಧ್ಯವಾಗದ 'ಪಂಟ' ವಿಶಿಷ್ಟ ಬಗೆಯ ಸಿನಿಮಾ ಎನ್ನುವುದು ನಾರಾಯಣ್ ಅವರ ಅನಿಸಿಕೆ. ಚಿತ್ರದ ನಾಯಕನ ವ್ಯಕ್ತಿತ್ವ ಕೂಡ ಭಿನ್ನವಾದುದಂತೆ. ಯಾವ ಕ್ಷಣದಲ್ಲಿ ಏನನ್ನು ಯೋಚಿಸುತ್ತಾನೆ ಎಂದು ಅಂದಾಜು ಮಾಡಲು ಸಾಧ್ಯವಾಗದ ತರುಣನ ಚಿತ್ರಣ 'ಪಂಟ'ದಲ್ಲಿದೆ.

■ ರಘು